KARN010004092026

| | | |
|---|---|---|
| Presented on | : | 24-02-2026 |
| Registered on | : | 24-02-2026 |
| Decided on | : | 23-03-2026 |
| Duration | : | 27 days |

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

:ಉಪಸ್ಥಿತರು:

M H ANNAYYANAVAR Digitally signed by M H ANNAYYANAVAR Date: 2026.03.23 13:15:59 +0530

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

## ದಿನಾಂಕ 23 ನೇ ಮಾರ್ಚ್ ಮಾಹೆ 2026

## ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 137/2026

ಅರ್ಜಿದಾರರು : ಶ್ರೀ ಸಾಕೀಲ್ ಪಾಷ ಉಃ ಸಜಿಲ್ ಪಾಷ ಉಃ ಸಲ್ಮಾನ್ ಖಾನ್,
1 ನೇ ಆರೋಪಿ
ಬಿನ್ ಆದಿಲ್ ಪಾಷ,
ವಯಸ್ಸು 32 ವರ್ಷ.
ವಾಸಃ ನಂ.84, ಸರ್ಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿ,
ಬೆಂಗಳೂರು ದಕ್ಷಿಣ, ಬೆಂಗಳೂರು.
(ಪರವಾಗಿ ಶ್ರೀ ಬಿ.ಕೆ.ರಾಜೇಶಕುಮಾರ, ವಕೀಲರು)

- ವಿರುದ್ಧ -

ಎದುರುದಾರರು : ಸರ್ಕಾರದ ಪರವಾಗಿ ಐಜೂರು ಪೊಲೀಸ್ ಠಾಣೆ,
ಬೆಂಗಳೂರು ದಕ್ಷಿಣ ಜಿಲ್ಲೆ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

<u>ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.**483** ರಡಿ</u>
<u>ಜಾಮೀನು ಅರ್ಜಿಯ ಮೇಲೆ ಆದೇಶ</u>

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 483 ರ ಅಡಿಯಲ್ಲಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಐಜೂರು ಪೋಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿವುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆಃ-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 483 ರಡಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ನಕಾರಾತ್ಮಕವಾಗಿ

ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

## ಕಾರಣಗಳು

5. ಅಂಶ ಸಂಖ್ಯೆ **1:** ಪಿರ್ಯಾದಿದಾರರು ಕೊಟ್ಟ ದೂರಿನಂತೆ ಐಜೂರು ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ಐಜೂರು ಪೊಲೀಸ್ ಠಾಣಾ ಅಪರಾಧ ಸಂಖ್ಯೆ 5/2026 ಎನ್.ಡಿ.ಪಿ.ಎಸ್ ಕಾನೂನು ಕಲಂ.8(ಸಿ), 22(ಬಿ)ರ ಅಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ.

6. **ಪ್ರಕರಣದ ಸಂಕ್ಷಿಪ್ತ ಸಾರಾಂಶ:** ದೂರನ್ನು ಪರಿಶೀಲಿಸಲಾಗಿ, ದಿನಾಂಕ 06.02.2026 ರಂದು ಮಧ್ಯಾಹ್ನ 1.00 ಗಂಟೆಗೆ ರಾಮನಗರ ಟೌನ್, ಆರ್.ಎಂ.ಸಿ. ಯಾರ್ಡ್ ಮಾವಿನಕಾಯಿ ಮಂಡಿಯ ಬಳಿ ಯಾರೋ ಒಬ್ಬ ಕಾರಿನಲ್ಲಿ ಅಕ್ರಮವಾಗಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದಿದ್ದು, ಸದರಿ

ಮಾಹಿತಿಯನ್ನು ದಿನಚರಿಯಲ್ಲಿ ನಮೂದಿಸಿ, ಆ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿ, ಅನುಮತಿ ಪಡೆದುಕೊಂಡು, ಪಂಚರನ್ನು ಬರಮಾಡಿಕೊಂಡು, ಸಿಬ್ಬಂದಿ ಮತ್ತು ಪಂಚರೊಂದಿಗೆ ಪಿರ್ಯಾದಿ ಪರಸ್ಪರ ಅಂಗಶೋಧನೆ ಮಾಡಿಕೊಂಡು ಸರ್ಕಾರಿ ಜೀಪಿನಲ್ಲಿ ದಾಳಿ ಸಮೀಪದ ಸ್ಥಳಕ್ಕೆ ಹೋಗಿ ಮರೆಮಾಚಿ ನೋಡಿದಾಗ ಅಲ್ಲಿ ರಸ್ತೆಯಲ್ಲಿ ಒಬ್ಬ ಅಸಾಮಿಯು ಕಾರಿನಲ್ಲಿ ಕುಳಿತುಕೊಂಡಿರುವುದು ಕಂಡು ಬಂತು. ಸದರಿ ಕಾರಿನ ಮೇಲೆ ದಾಳಿ ಮಾಡಿ ಸದರಿ ಆಸಾಮಿಯನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ಮಾಡಿದಾಗ ತನ್ನ ಹೆಸರು ಸಾಕೀಲ್ ಪಾಷ ಉಃ ಸಜಿಲ್ ಪಾಷ ಉಃ ಸಲ್ಮಾನ್ ಖಾನ್ (ಅರ್ಜಿದಾರ) ಎಂದು ಹೇಳಿದ್ದು, ಸದರಿಯವರನ್ನು ವಿಚಾರಣೆ ಮಾಡಿದಾಗ ತನ್ನ ಬಳಿ ಮೆತೋಪಿಟಮೈನ್ ಎಂಬ ಮಾದಕ ವಸ್ತು ಇರುವುದಾಗಿ ಹಾಗೂ ಪ್ರತಿ ಗ್ರಾಂಗೆ ರೂ.1,000/-ರಂತೆ ಖರೀದಿಸಿದ ಬಗ್ಗೆ ಹಾಗೂ ಹೆಚ್ಚಿನ ಹಣಕ್ಕೆ ಮಾರುತ್ತಿದ್ದ ಬಗ್ಗೆ ಹೇಳಿದ್ದು ಮತ್ತು ಮಾದಕ ವಸ್ತುವನ್ನು ಕಾರಿನ ಹಿಂಬದಿಯ ಸೀಟಿನಲ್ಲಿಟ್ಟಿರುವುದಾಗಿ ತಿಳಿಸಿದ್ದು, ಸದರಿ ಆರೋಪಿಯಿಂದ ಬುಲಾರೋ ಕಾರ್ ಹಾಗೂ ಕಾರಿನ ಹಿಂಬದಿ ಸೀಟಿನ ಆರ್ಮ್ಸ್ ರೆಸ್ಟನಲ್ಲಿ ಒಂದು ಜಿಪ್ ಲಾಕ್ ಕವರ್ ಇದ್ದು, ಅದರಲ್ಲಿ Methamphetamine ಇದ್ದು, ಅದನ್ನು ತೂಕ ಮಾಡಿದಾಗ 15.41 ಗ್ರಾಂ ಇದ್ದು, ಜಿಪ್ ಲಾಕ್ ಕವರ್ ಸಮೇತ ತೂಕ ಮಾಡಿದಾಗ 19.44 ಗ್ರಾಂ ಆಗಿರುತ್ತದೆ ಹಾಗೂ 13 ಚಿಕ್ಕ ಪಾಲಿತಿನ್ ಕವರ್, ರೂ.2,000/- ನಗದು ಹಣ, ಚಾಲಕನ ಸೀಟಿ ಬಳಿ ಸ್ಯಾಮ್ಸಂಗ್ ಮೊಬೈಲ್ ಇವುಗಳನ್ನು ಪ್ರತ್ಯೇಕವಾಗಿ ತೂಕ ಮಾಡಿ ಸೀಲು ಮಾಡಿ ಮಹಜರ್ ಮಾಡಿ ವಶಪಡಿಸಿಕೊಳ್ಳಲಾಯಿತು. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದು, ಎದುರುದಾರ ಪೊಲೀಸರು ಅರ್ಜಿದಾರರ ಕಡೆಯಿಂದ Methamphetamine ಎಂಬ ಮಾದಕ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದರಿಂದ, ಸದರಿ ಪ್ರಕರಣದಲ್ಲಿ ವಾಣಿಜ್ಯ ಪ್ರಮಾಣದ ಮಾದಕ ವಸ್ತುವಾಗಿರುವುದರಿಂದ, ಸದರಿ ಅಪರಾಧಕ್ಕೆ 10 ವರ್ಷದಿಂದ 20 ವರ್ಷದವರೆಗೆ ಶಿಕ್ಷೆ ಮತ್ತು ಒಂದು ಲಕ್ಷದಿಂದ ಎರಡು ಲಕ್ಷದವರೆಗೆ ದಂಡ ವಿಧಿಸತಕ್ಕಂತ ಅಪರಾಧವಾಗಿದ್ದು, ಸದರಿ ಅಪರಾದ ಘೋರ ಸ್ವರೂಪದ ಅಪರಾಧವಾಗಿರುವುದರಿಂದ ಅರ್ಜಿದಾರ ಅಪರಾಧ ಮಾಡಿದ್ದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅರ್ಜಿದಾರ ಜಾಮೀನು ಪಡೆಯಲು ಅರ್ಹರಿರುವುದಿಲ್ಲ.

8. 1 ನೇ ಆರೋಪಿ (ಕ್ರಿ.ಮಿಸ್ ನಂ.137/2026 ರ ಅರ್ಜಿದಾರ) ಈತನ ಕಡೆಯಿಂದ 15.41 ಗ್ರಾಂ Methamphetamine ಅಮಾನತ್ತುಪಡಿಸಿಕೊಂಡಿದ್ದು, ಸದರಿ ಮಾದಕ ವಸ್ತು ಆರೋಪಿಗೆ ಹೇಗೆ ಬಂತು ಎಂಬುದರ ಬಗ್ಗೆ ತನಿಖೆ ಮಾಡಬೇಕಾಗಿರುತ್ತದೆ. ಸಾಮಾನ್ಯವಾಗಿ ಇಂಥ ಮಾದಕ ವಸ್ತು ಕರ್ನಾಟಕದಲ್ಲಿ ಇರುವುದಿಲ್ಲ. ಈ ಕಾರಣದಿಂದ ಅರ್ಜಿದಾರ ಜಾಮೀನು ಪಡೆಯಲು ಅರ್ಹರಿರುವುದಿಲ್ಲ.

9. 1 ನೇ ಆರೋಪಿ/ಅರ್ಜಿದಾರ ಕೊಟ್ಟ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ 3 ನೇ ಆರೋಪಿ (ಕ್ರಿ.ಮಿಸ್.ನಂ.128/2026) - ಸಾಧಿಕ್ ಖಾನ್ ಮತ್ತು ಇನ್ನುಳಿದ 2 ಜನ ಆರೋಪಿತರ ಜೊತೆ ಸೇರಿಕೊಂಡು ಮಾದಕ ವಸ್ತುವನ್ನು ಮಾರಾಟ ಮಾಡುತ್ತಿದ್ದೆವು ಅಂತಾ ಹೇಳಿದ್ದು, ಸದರಿಯವರಿಗೆ ದಸ್ತಗಿರಿ ಮಾಡುವುದಕ್ಕಿಂತ ಪೂರ್ವದಲ್ಲಿ

ಬಿ.ಎನ್.ಎಸ್.ಎಸ್.ಕಲಂ.35(3)ರ ಅಡಿಯಲ್ಲಿ ನೋಟೀಸ್ ಕೊಡಲು ಪ್ರಯತ್ನಿಸಿದ್ದರೂ ಸಹಿತ ವಿಳಾಸ ಲಭ್ಯವಿಲ್ಲದೇ ಇರುವುದರಿಂದ ನೋಟೀಸ್ ಜಾರಿ ಮಾಡಲು ಆಗಿರುವುದಿಲ್ಲ.

10. 1 ನೇ ಆರೋಪಿ ಕೊಟ್ಟ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ ಕ್ರಿ.ಮಿಸ್.ನಂ.128/2026 ಅರ್ಜಿದಾರ - ಸಾಧಿಕ್ ಖಾನ್ ಉಃ ಸಾಧಿಕ್, ಈತನು ಬೆಂಗಳೂರಿನಲ್ಲಿದ್ದು, ಈತನನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಒಳಪಡಿಸಿದಾಗ ಸದರಿ ಮಾದಕ ವಸ್ತುವನ್ನು ಚಿಲ್ಲರೆಯಾಗಿ ಮಾರಾಟ ಮಾಡುತ್ತಿದ್ದೆವು ಅಂತಾ ಒಪ್ಪಿಕೊಂಡಿದ್ದು, ನಂತರ 2 ನೇ ಆರೋಪಿ - ಜಾನ್ ಈತನು ಬೇರೆ ದೇಶದವನಾಗಿದ್ದು, ಈತನ ಜೊತೆ ಸದರಿ ಅರ್ಜಿದಾರ ಇಬ್ಬರು ಪರಿಚಯ ಇರುವುದರಿಂದ, ಸದರಿ ಮಾದಕ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದರಿಂದ, ಸದರಿ ಪ್ರಕರಣ ಘೋರ ಸ್ವರೂಪದ ಪ್ರಕರಣವಾಗಿರುವುದರಿಂದ, ಈ ಹಂತದಲ್ಲಿ ಅರ್ಜಿದಾರರು ಜಾಮೀನು ಪಡೆಯಲು ಅರ್ಹರಿರುವುದಿಲ್ಲ.

11. ಸದರಿ ಪ್ರಕರಣದಲ್ಲಿ 4 ನೇ ಆರೋಪಿ ತಲೆಮರೆಸಿಕೊಂಡಿದ್ದು, ನ್ಯಾಯಾಲಯಕ್ಕೆ ಎದುರುದಾರ ಪೊಲೀಸರು ಸದರಿ ಪ್ರಕರಣದಲ್ಲಿ ಎನ್.ಡಿ.ಪಿ.ಎಸ್.ಕಲಂ.22(ಸಿ)ನ್ನು ಸೇರ್ಪಡೆ ಮಾಡಬೇಕು ಅಂತಾ ಅರ್ಜಿ ಸಲ್ಲಿಸಿದ್ದು, ಸದರಿ ಮಾದಕ ವಸ್ತುವಿನ ಬಗ್ಗೆ ವಿವರವಾದ ತನಿಖೆ ಮಾಡಬೇಕಾಗಿರುವುದರಿಂದ, ಅರ್ಜಿದಾರರು ಸದರಿ ಪ್ರಕರಣದಲ್ಲಿ ಭಾಗಿಯಾಗಿದ್ದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಅರ್ಜಿದಾರರು ಜಾಮೀನು ಪಡೆಯಲು ಅರ್ಹರಿರುವುದಿಲ್ಲ.

12. ಸದರಿ ಪ್ರಕರಣ ಇನ್ನೂ ತನಿಖಾ ಹಂತದಲ್ಲಿರುವುದರಿಂದ, ಸದರಿ ಮಾದಕ ವಸ್ತುವನ್ನು ಇನ್ವೆಂಟರಿ ಮಾಡಿದ್ದು, ಎಫ್.ಎಸ್.ಎಲ್.ಗೆ ಕಳುಹಿಸಿಕೊಟ್ಟಿದ್ದು, ವರದಿ ಬರಬೇಕಾಗಿದ್ದು, ಇಂತಹ ಸಂದರ್ಭದಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡಿದ್ದಲ್ಲಿ ಪುನಃ ಇಂತಹ ಅಪರಾಧ ಮಾಡುವ ಸಾಧ್ಯತೆ ಇರುತ್ತದೆ, ತಲೆಮರೆಸಿಕೊಳ್ಳುವ ಸಾಧ್ಯತೆ ಇರುತ್ತದೆ, ಸಾಕ್ಷಿದಾರರನ್ನು ಎದುರಿಸುವ ಸಾಧ್ಯತೆ ಇರುವುದರಿಂದ ಅರ್ಜಿದಾರರು ತನ್ನ ಅರ್ಜಿಯಲ್ಲಿ ನಮೂದಿಸಿದ ಕಾರಣಗಳು ನ್ಯಾಯಸಮ್ಮತವಾಗಿಲ್ಲದೇ ಇರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

13. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶ:

<u>ಆದೇಶ</u>

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ.483 ರ ಅಡಿಯಲ್ಲಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **23** ನೇ ಮಾರ್ಚ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.